ದಿನಾಂಕಃ 13.12.2024

RA 24/2023 ಪಿ.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ3 ರಿಂದ 6 ನೇ ಪ್ರತಿವಾದಿಯರ ಪರ ಶ್ರೀ ಬಿ ಎ ಜಿ ವಕೀಲರಿಂದಃ

1. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು ವಿದ್ಯಾಭ್ಯಾಸ ಮಾಡಿದ್ದರೂ ಸಹ ಮಾಡಿಲ್ಲವೆಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ನಾನು ನಮ್ಮ ಗ್ರಾಮದ ಮುಖಂಡರು ಎಂದರೆ ಸರಿಯಲ್ಲ. ಕಾಳಿಕಾಂಭ ವಿದ್ಯಾಸಂಸ್ಥೆಗೆ ನಾನು ಟ್ರಸ್ಟಿ ಆಗಿದ್ದೇನೆ ಎಂದರೆ ಸರಿ. ನನಗೆ 3 ಜನ ಮಕ್ಕಳು. ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಮಗ. ನನ್ನ ಮಕ್ಕಳ ಮದುವೆಯನ್ನು ಯಾವ ದಿನಾಂಕಗಳಲ್ಲಿ ಮಾಡಿರುತ್ತೇನೆಂದು ನನಗೆ ದಿನಾಂಕ ಗೊತ್ತಿಲ್ಲ. ಮದುವೆಯಾಗುವ ವರೆಗೂ ಹೆಣ್ಣು ಮಕ್ಕಳು ನಮ್ಮ ಜೊತೆಯಲ್ಲಿಯೇ ಇದ್ದರು ಎಂದರೆ ಸರಿ. ಮದುವೆಯಾದ ನಂತರ ನಿಮ್ಮ ಹೆಣ್ಣು ಮಕ್ಕಳನ್ನು ಕರೆದು ಕಳುಹಿಸುವುದು,ಮಕ್ಕಳ ಬಾಣಂತರ ಪಾಲನೆ ಪೋಷಣೆ ನೀವೇ ಮಾಡಿರುವುದು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನನ್ನ ಹೆಣ್ಣು ಮಕ್ಕಳು ಈಗ ನನ್ನ ಮನೆಗೆ ಬರುತ್ತಿರುವುದಿಲ್ಲ. ಹಾಲಿ ನಾನು ಒಬ್ಬನೇ ಈಗ ನನ್ನ ಮನೆಯಲ್ಲಿ ವಾಸವಾಗಿದ್ದೇನೆ. ವೀಣಾ ಮತ್ತು ಶಾಮಸುಂದರ್ ನನ್ನ ಚೆನ್ನಾಗಿ ಇರುವುದಿಲ್ಲ. ನನ್ನ ಮತ್ತು ಅವರ ನಡುವೆ ಜಮೀನು ವಿಚಾರಕ್ಕಾಗಿಯೇ ಮನಸ್ತಾಪ ಇದೆ. ನಾನು ಮತ್ತು ನನ್ನ ಮಕ್ಕಳು ವಿಭಾಗ ಆಗಿರುವುದಿಲ್ಲ.

2. ವೀಣಾ ರವರು ಸಿವಿಲ್ ನ್ಯಾಯಾಲಯದಲ್ಲಿ ಭಾಗ ಕೇಳಿ ಹಾಕಿದ್ದ ದಾವೆ ಬಗ್ಗೆ ನಿಮಗೆ ಗೊತ್ತಿತ್ತು ಎಂದರೆ ಸಾಕ್ಷಿ ಗೊತ್ತಿರಲಿಲ್ಲ ಅದಕ್ಕಾಗಿಯೇ ಈಗ ನ್ಯಾಯಾಲಯಕ್ಕೆ ಬಂದಿರುವುದು ಎಂದು ಉತ್ತರಿಸುತ್ತಾರೆ. ಪುನಃ ಮುಂದುವರಿದು ನೋಟೀಸ್ ಬಂದಿತ್ತು ಅದು ಕಳೆದು ಹೋಗಿದೆ ಎಂದು ಉತ್ತರಿಸುತ್ತಾರೆ. ನೋಟೀಸ್ ಬಂದ ನಂತರವಾದರೂ ನಿಮಗೆ ವೀಣಾ ರವರು ಕೇಸ್ ಹಾಕಿರುವ ವಿಚಾರ ಗೊತ್ತಾಗಿತ್ತಾ ಇಲ್ಲವಾ ಎಂದರೆ ಸಾಕ್ಷಿ ಅದು ನನಗೆ ಮರತೇ ಹೋಗಿತ್ತು ಎಂದು ಉತ್ತರಿಸುತ್ತಾರೆ. 2 ವರ್ಷದ ಹಿಂದೆ ಯಾರೋ ಈ ರೀತಿ ಆಗಿದೆ ಎಂದು ವಿಚಾರ ತಿಳಿಸಿದ ನಂತರ ನನಗೆ ಗೊತ್ತಾಗಿರುತ್ತದೆ, ಅದಕ್ಕೂ ಮೊದಲು ನನಗೆ ಗೊತ್ತಿರಲಿಲ್ಲ. ನನ್ನ ಮಕ್ಕಳಾದ ವೀಣಾ ಮತ್ತು ಶಾಮಸುಂದರ್ ಇದೇ ನ್ಯಾಯಾಲಯದಲ್ಲಿ ಆರ್ ಎ 92/2019 ದಾಖಲಿಸಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಆ

ಕೇಸ್ ನಲ್ಲಿ ನಿಮಗೆ ನೋಟೀಸ್ ಜಾರಿಯಾಗಿತ್ತು ಎಂದರೆ ಸಾಕ್ಷಿ ಜಾರಿಯಾಗಿತ್ತು ಆದರೆ ಅದರಲ್ಲಿ ಬರಬೇಕು ಎಂದು ನನಗೆ ಗೊತ್ತಾಗಲಿಲ್ಲ ಎಂದು ಉತ್ತರಿಸುತ್ತಾರೆ. ಆ ಕೇಸ್ ನ ನೋಟೀಸ್ ಜಾರಿಯಾದ ನಂತರ ನೀವು ವಕೀಲರನ್ನು ನೇಮಕ ಮಾಡಿಕೊಂಡಿದ್ದೀರಾ ಎಂದರೆ ಸಾಕ್ಷಿ ನೇಮಕ ಮಾಡಿಕೊಂಡಿದ್ದೇನೆ ಎಂದು ಉತ್ತರಿಸುತ್ತಾರೆ. ಅಸಲು ದಾವಾ 493/2011 ರಂತೆ ನಿಮ್ಮ ಮಗಳು ವೀಣಾ ರವರು ದಾಖಲಿಸಿದ್ದ ದಾವೆಯ ಬಗ್ಗೆ ನಿಮಗೆ ಸಂಪೂರ್ಣವಾದ ಮಾಹಿತಿ ಇತ್ತು, ಅವರನ್ನು ನೀವೇ ನಿಮ್ಮ ಜೊತೆ ನ್ಯಾಯಾಲಯಕ್ಕೆ ಕರೆದುಕೊಂಡು ಬರುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನನಗೆ 2011 ರಲ್ಲಿಯೇ ನನಗೆ ದಾವೆಯ ಬಗ್ಗೆ ಸಂಪೂರ್ಣ ಮಾಹಿತಿ ಇತ್ತು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಆರ್ ಎ 92/2019 ರಲ್ಲಿ ನಿಮ್ಮ ಮಗಳಿಗೆ ಅನಾನುಕೂಲವಾಗುತ್ತದೆ ಎಂಬ ಉದ್ದೇಶದಿಂದ ನೀವು ಈ ಮೇಲ್ಮನವಿ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನಾನು ಈ ಮೇಲ್ಮನವಿಯನ್ನು ನನ್ನ ವಿರುದ್ಧವಾಗಿ ಆದೇಶವಾಗಿದೆ ಎಂದು ನಾನು ಪ್ರಶ್ನಿಸಿ ಸಲ್ಲಿಸಿರುತ್ತೇನೆ. ನೀವು ತಡವಾಗಿ ಮೇಲ್ಮನವಿ ಸಲ್ಲಿಸಲು ನಿಮ್ಮ ಅರ್ಜಿಯಲ್ಲಿ ಸಕಾರಣಗಳನ್ನು ನೀಡಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಾಗಿದ್ದನ್ನು ಹೇಳಿದ್ದೇನೆ ಎಂದುಉತ್ತರಿಸುತ್ತಾರೆ. ನಾನು ನನ್ನ ಅರ್ಜಿಯಲ್ಲಿ ಸಕಾರಣಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ಹೇಗಾದರೂ ಮಾಡಿ 3 ಮತ್ತು 4 ನೇ ಎದುರುದಾರರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಮತ್ತು ಅವರಿಂದ ಹಣ ವಸೂಲಿ ಮಾಡಬೇಕೆಂಬ ಉದ್ದೇಶದಿಂದ ಮತ್ತು ನಿಮ್ಮ ಮಗಳು ವೀಣಾ ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಈ ಮೇಲ್ಮನವಿ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಮಗಳು ಸಲ್ಲಿಸಿರುವ ಪ್ರಕರಣಕ್ಕೆಅನುಕೂಲವಾಗಲೀ ಎಂಬ ಉದ್ದೇಶದಿಂದ ಯಾವುದೇ ಸಕಾರಣ ಇಲ್ಲದೇ ಇದ್ದರೂ ಈ ಮೇಲ್ಮನವಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಂ.ಎ.ಸಿ.ಟಿ

ಮದ್ದೂರು.